ಮೂಗಿನಂತೆ ಸೋರುತ್ತ, ಸೋರಿದ ಕಡೆ ಭೂಪಟ ರಚಿಸುತ್ತ, ಪಾಚಿಬೆಳೆಸಿಕೊಂಡು, ತಲೆಗೆ ಕಿರೀಟತೊಟ್ಟಂತೆ ಅರಳಿಗಿಡ ಬೆಳೆಸಿಕೊಂಡು, ಚರಿತ್ರೆಯಿಂದ ನಿರ್ಗಮಿಸುವ ಸೂಚನೆ ನೀಡುತ್ತದೆ. ಕೆಲವು ಅರಮನೆಗಳು ಮ್ಯೂಸಿಯಂ ಅಥವಾ ಹೋಟೆಲುಗಳಾಗಿ ಸಾವನ್ನು ತಪ್ಪಿಸಿಕೊಂಡರೆ, ಮತ್ತೆ ಕೆಲವು ಅರಮನೆಯಾಗಿದ್ದಾಗ ಮಾಡಿದ ಪಾಪವನ್ನು ಶಾಲಾ ಕಾಲೇಜಾಗಿ ತೊಳೆದುಕೊಳ್ಳುತ್ತಿರುತ್ತವೆ. ಕಾಲಗತಿಯಲ್ಲಿ ಮನೆಗಳು ಪಡೆದುಕೊಳ್ಳುವ ರೂಪಾಂತರಗಳು ಊಹಾತೀತ. ನರಸಿಂಹಸ್ವಾಮಿಯವರ 'ಮನೆಯಿಂದ ಮನೆಗೆ' ಕೇವಲ ಕವನವಲ್ಲ; ನೆನಪುಗಳ ತಿಜೋರಿ ಬಿಚ್ಚಿ ನೋಡುವ ಬೀಗದೆಸಳು!

ಗಣೆದೂಳು ಬಿಸಿಲೂ ಇರುವ ಊರನ್ನು ಬಿಟ್ಟು ಧಾರವಾಡಕ್ಕೊ ಮೈಸೂರಿಗೊ ಹೋಗಬೇಕು ಎಂಬ ಆಲೋಚನೆ ಮಿಂಚಿ ಮಾಯವಾಗುತ್ತದೆ. ಆದರೆ ಬಾಡಿಗೆ ಮನೆಗಳಿಂದ ಕಿತ್ತುಕೊಂಡು ಬಂದಷ್ಟು ಸ್ವಂತ ಮನೆ ತ್ಯಜಿಸುವುದು ಸುಲಭವೇ? ಮನೆಸುತ್ತ ಮಾವು, ಸಪೋಟ, ಸಂಪಿಗೆ, ನಿಂಬೆ, ತೆಂಗು, ಅಡಕೆ , ಹಲಸು, ಸೀತಾಫಲ, ನುಗ್ಗೆ, ಅಂಜೂರ, ನೆಲ್ಲಿ, ಪಾರಿಜಾತ ಮರಗಳು ಆಳವಾಗಿ ಬೇರುಬಿಟ್ಟಿವೆ. ಆದರೆ ಹೋಗುತ್ತೇವೆಂದು ಹಟಮಾಡಿದರೆ ಬೀಳ್ಕೊಡುವುದಕ್ಕೆ ಅವಕ್ಕಾಗಲಿ ಮನೆಗಾಗಲಿ ದುಗುಡ ಇರಲಿಕ್ಕಿಲ್ಲ. ಕಟ್ಟಿದಮನೆ ತೊರೆವ ವಿಷಯದಲ್ಲಿ ಹಕ್ಕಿಗಳ ನಿರಾಳತೆ ನಮಗೆ ಸಾಧ್ಯವೇ? ಮನುಷ್ಯ ಮಾತ್ರರಿಗೆ ವಾಸಿಸಿದ ಮನೆಗಳ ಸ್ಮೃತಿಗಳು ಬಳ್ಳಿಯಂತೆ ಸುತ್ತಿಕೊಂಡು ಕಾಡುತ್ತವೆಯೇ? ನೋವುನಲಿವಿನ ಎಳೆಗಳು ಒಟ್ಟಿಗೇ ನುಲಿದುಕೊಂಡಿರುವ ಅವುಗಳಿಂದ ಬಹುಶಃ ನಮಗೆ ಬಿಡುಗಡೆ ಇದ್ದಂತಿಲ್ಲ. ಬಂಧನ ಹಿತವಾಗಿದ್ದಲ್ಲಿ ಬಿಡುಗಡೆಯ ಅವಸರವಾದರೂ ಯಾಕೆ?


## ರಹಮತ್ ತರೀಕೆರೆ

ಕನ್ನಡದ ಸಂಸ್ಕೃತಿ ಚಿಂತನೆಯಲ್ಲಿ ರಹಮತ್ ಅವರದು ಪ್ರಮುಖ ಹೆಸರು. ಅವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ನಾಡು ಸುತ್ತುವ ದಾಹ, ಮೋಹ ಇರುವ ಅವರ ಪ್ರಕಟಿತ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು.